**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No. 318/2022**

ಪಿ**.**ಡಬ್ಲ್ಯೂ**. 1**

ದಿನಾಂಕಃ **24.06.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು ಎದುರುದಾರರ ಪರ ಶ್ರೀ ಡಿಜಿ ಪಿ ವಕೀಲರಿಂದಃ-

ಸ್ವಾಧೀನಪಡಿಸಿಕೊಂಡ ಜಮೀನು ನನ್ನ ತಂದೆಯ ಹೆಸರಿನಲ್ಲಿತ್ತು. ಪುಟ್ಟಮ್ಮ ನನ್ನ ತಾಯಿ. ಎಲ್ಲಾ ನೋಟೀಸ್ ಗಳು ನಮ್ಮ ತಾಯಿಯ ಹೆಸರಿಗೆ ಬಂದಿರುತ್ತದೆ. ಸರ್ವೇ ನಂ. 86/1A ರಲ್ಲಿ ಇರುವ ಒಟ್ಟು ಎಕರೆ 1 ಎಕರೆ 17 ಗುಂಟೆ ಜಮೀನಿನಲ್ಲಿ 20 ಗುಂಟೆ ಜಮೀನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗಿದೆ ಅಂದರೆ ಸರಿ. ಉಳಿಕೆ ಜಮೀನು ತಮ್ಮ ಬಳಿ ಇದೆ ಅಂದರೆ ಸರಿ .ಸ್ವಾಧೀನಪಡಿಸಿಕೊಂಡ 20 ಗುಂಟೆ ಜಮೀನಿನಲ್ಲಿ ಯಾವುದೇ ಮರಗಳು ಇರಲಿಲ್ಲ ಅಂದರೆ ಸರಿ. ನಮ್ಮ ಜಮೀನು ಖುಷ್ಕಿ ಜಮೀನು ಅಂದರೆ ಸರಿ. ಸದರಿ ಜಮೀನಿನಲ್ಲಿ ಏನು ಬೆಳೆಯುತ್ತಿರಲಿಲ್ಲ ಅಂದರೆ ಸರಿಯಲ್ಲ. ರಾಗಿ ಬೆಳೆಯನ್ನು ಸದರಿ ಜಮೀನಿನಲ್ಲಿ ಬೆಳೆಯುತ್ತಿದ್ದೇವು. ನಮ್ಮ ಜಮೀನಿಗೆ ಹೊಂದಿಕೊಂಡಂತೆ ಯಾವುದೇ ಮುಖ್ಯರಸ್ತೆಗಳು ಇರಲಿಲ್ಲ ಅಂದರೆ ಸರಿ. ಸ್ವಾಧೀನಪಡಿಸಿಕೊಂಡ ಜಮೀನಿಗೆ ಹೊಸ ಭೂಸ್ವಾದೀನ ಕಾಯಿದೆಯ ಪ್ರಕಾರ ಪರಿಹಾರವನ್ನು ನೀಡಲಾಗಿದೆ ಅಂದರೆ ಸರಿ.

ಕೊರಟಗೆರೆಯಿಂದ ನಮ್ಮ ಊರು ಸುಮಾರು 18-20 ಕಿಮೀ ಅಂತರವಿದೆ ಅಂದರೆ ಸರಿ. ಹೊಳವನಹಳ್ಳಿ ಹೋಬಳಿಯಿಂದ ನಮ್ಮ ಊರಿಗೆ ಸುಮಾರು 6 ಕಿಮೀ ಅಂತರವಿದೆ ಅಂದರೆ ಸರಿ. ನಮ್ಮ ಊರು ಯಾವುದೇ ಸೌಲಭ್ಯಗಳಿಲ್ಲದ ಕುಗ್ರಾಮ ಅಂದರೆ ಸರಿಯಲ್ಲ. ತೋಟಗಾರಿಕೆ ಮತ್ತು ಲಾಲ್ ಬಾಗ್ ಸಹ ಈಗ ಅಭಿವೃದ್ಧಿ ಪಡಿಸಲಾಗುತ್ತಿದ್ದೆ.

ಸ್ವಾಧೀನಪಡಿಸಿಕೊಂಡ 1 ಗುಂಟೆ ಜಮೀನಿಗೆ ರೂ.72,000-0 ಇದೆ ಎಂದು ದಾಖಲೆ ಹಾಜರುಪಡಿಸಿರುತ್ತೇನೆ. ಸ್ವಾಧೀನಪಡಿಸಿಕೊಂಡ ನಮ್ಮ ಜಮೀನು ಭೂ ಪರಿವರ್ತನೆಯಾಗಿರಲಿಲ್ಲ ಅಂದರೆ ಸರಿ. ಹೆಚ್ಚಿನ ಪರಿಹಾರಕ್ಕಾಗಿ ಸಲ್ಲಿಸಿರುವ ನಮ್ಮ ಅರ್ಜಿ ಕಾಲಮಿತಿಯ ವ್ಯಾಪ್ತಿಗೆ ಬರುವುದಿಲ್ಲ ಅಂದರೆ ಸರಿಯಲ್ಲ. ನಿಪಿ-11 ಭೂ ಸ್ವಾಧೀನಪಡಿಸಿಕೊಂಡ 3 ವರ್ಷದ ಮಿತಿಗೆ ಬರುವುದಿಲ್ಲ ಅಂದರೆ ಸರಿ. ಸದರಿ ಕ್ರಯಪತ್ರದ ಜಮೀನು ಮುಖ್ಯರಸ್ತೆಗೆ ಹೊಂದಿಕೊಂಡಂತಹ ಜಮೀನು ಅಂದರೆ ಸರಿ. ನಿಪಿ-12 ಕ್ರಯಪತ್ರವು ಸಹ ಭೂ ಸ್ವಾಧೀನಪಡಿಸಿಕೊಂಡ 3 ವರ್ಷದ ಮಿತಿಗೆ ಬರುವುದಿಲ್ಲ ಅಂದರೆ ಸರಿ. ನಿಪಿ-12 ನಿವೇಶನದ ಕ್ರಯಪತ್ರ ಅಂದರೆ ಸರಿ. ಸ್ವಾಧೀನಪಡಿಸಿಕೊಂಡ ಜಮೀನು ನಿವೇಶನವಾಗಿರಲಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ-12ಕ್ಕೆ ಹೊಂದಿಕೊಂಡಂತೆ ನಮ್ಮ ಜಮೀನು ಇತ್ತು ಎಂದು ನುಡಿಯುತ್ತಾರೆ.

ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ ಮತ್ತು ಇತರೆ ಇಲಾಖೆಗಳು ಸೇರಿ ವೈಜ್ಞಾನಿಕವಾಗಿ ಮತ್ತು ಸೂಕ್ತವಾದ ಪರಿಹಾರವನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. ತಾವು ಹಾಜರುಪಡಿಸಿರುವ ದಾಖಲೆಗಳನ್ನು ನಮ್ಮ ಜಮೀನಿಗೆ ಸಂಬಂದಪಟ್ಟದ್ದು ಅಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಹಣವನ್ನು ಪಡೆಯಲು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ -

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು